**<u>ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ</u>**

| | |
|---|---|
| ಸಿ.ಸಿ.ನಂ. | 360/2022 |
| ಸಿ.ಡಬ್ಲೂ | 3 |
| ಪಿ.ಡಬ್ಲೂ | 1 |

| | | |
|---|---|---|
| ಹೆಸರು | :- | ದೇವಿಲಾಲ ರಜಪೂತ |
| ತಂದೆ/ಗಂಡನ ಹೆಸರು | :- | ನಾನಾಲಾಲ |
| ವಯಸ್ಸು | :- | 45 ವರ್ಷ |
| ಉದ್ಯೋಗ | :- | ವ್ಯಾಪಾರ |
| ವಾಸಸ್ಥಳ | :- | ಲೋಕಾಪೂರ |

<u>ಸಾಕ್ಷಿಯನ್ನು ದಿಃ 06.04.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>

ಸಾಕ್ಷಿಗೆ ಕನ್ನಡ ಬರುತ್ತಿಲ್ಲವಾಗಿದ್ದು, ಅವರು ಹಿಂದಿ ಭಾಷೆಯಲ್ಲಿ ಸಾಕ್ಷ್ಯ ನುಡಿದಿದ್ದನ್ನು ಪೀಠಾಸೀನಾಧಿಕಾರಿ ಹಿಂದಿ ಭಾಷೆ ಬರುತ್ತಿದ್ದ ಕಾರಣ ತರ್ಜುಮೆ ಮಾಡಿ ತೆಗೆದುಕೊಳ್ಳಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ</u>**

1. ಸಾಕ್ಷಿಗೆ ಈಗ ದಿಃ19.06.2022 ರ ಪಂಚನಾಮೆಯನ್ನು ತೋರಿಸುತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರ ಮೇಲೆ ಪೊಲೀಸರು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸುವುದಿಲ್ಲ. ಸಾಕ್ಷಿಗೆ ಈಗ ಒಂದು ಕೈ ಚೀಲ ಮತ್ತು ಒಂದು 33 ಸಾರಾಯಿ ಪ್ಯಾಕೆಟಗಳು ಇದ್ದ ರಟ್ಟಿನ ಬಾಕ್ಸ ತೋರಿಸುತ್ತಿದ್ದು, ಅವುಗಳನ್ನು ಅವರು ಗುರುತಿಸುವುದಿಲ್ಲ. ನನ್ನ ಮುಂದೆ ಯಾವುದೇ ಹಣ ವಶಪಡಿಸಿಕೊಂಡಿಲ್ಲ.

**<u>(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಣಿಸಿ ಮಾನ್ಯ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದರಿಂದ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)</u>**

**<u>ಪಾಟೀ ಸವಾಲು :ಸ.ಸ.ಅ ರವರಿಂದ</u>**

1. ದಿಃ19.06.2022 ರಂದು ಸಂಜೆ 04-35 ಗಂಟೆಗೆ ದುರ್ಗಾದೇವಿ ದೇವಸ್ಥಾನ ಹತ್ತಿರ ನಾನು ಮತ್ತು ಚಾಸಾ-2 ರವರು ಮಾತನಾಡುತ್ತಿದ್ದಾಗ ಚಾಸಾ-4 ರವರು ಬಂದು ಪಂಚರಾಗಲು ಕೇಳಿಕೊಂಡರು, ಆಗ ನಾವು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಂತರ ನಿಮ್ಮನ್ನು ಪೊಲೀಸ ಠಾಣೆಗೆ ಕರೆದುಕೊಂಡು ಬಂದು ಅಲ್ಲಿ ಆರೋಪಿತ ಜೆ.ಕೆ. ಸಿಮೆಂಟ್ ಫ್ಯಾಕ್ಟರಿ ಬಳಿ ಅಕ್ರಮ ಸಾರಾಯಿ ಮಾರಾಟ ಮಾಡುತ್ತಿದ್ದ ಬಗ್ಗೆ ಬಂದ ಮಾಹಿತಿ ವಿಷಯವನ್ನು ತಿಳಿಸಿದ್ದರು

ಎಂದರೆ ಸರಿಯಲ್ಲ. ನಂತರ ನಿಮ್ಮನ್ನು ಸರಕಾರಿ ಜೀಪನಲ್ಲಿ ಸದರಿ ಜಾಗೆಗೆ ಸಾಯಂಕಾಲ 5 ಗಂಟೆಗೆ ಕರೆದುಕೊಂಡು ಹೋದಾಗ ಅಲ್ಲಿ ಆರೋಪಿತ ಕೈ ಚೀಲ ಹಿಡಿದು ಕುಳಿತು ಸಾರಾಯಿ ಮಾರಾಟ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆದ್ದರಿಂದ ಆತನನ್ನು ಹಿಡಿದುಕೊಂಡು ಆತನ ಹೆಸರು ವಿಚಾರಿಸಲಾಗಿ, ಆತ ತನ್ನ ಹೆಸರು ದೇವರಾಜ ವಿಠ್ಠಲ ಸಾಲಮಂಟಪಿ ಸಾ-ಮುಧೋಳ ಎಂದು ತಿಳಿಸಿದ ಎಂದರೆ ಸರಿಯಲ್ಲ. ಆತನ ಬಳಿ ಇದ್ದ ಗೊಬ್ಬರದ ಪ್ಲಾಸ್ಟಿಕ ಚೀಲದಲ್ಲಿ ವೆಲಿಂಗಟನ್ ಬ್ಲಂಡೆಡ್ ಮಾಲ್ಟ ವಿಸ್ಕಿಯ 90 ಎಮ್.ಎಲ್ ಅಳತೆಯ 33 ಸಾರಾಯಿ ಪಾಕೆಟಗಳು ಇದ್ದವು ಎಂದರೆ ಸರಿಯಲ್ಲ. ಆತನ ಅಂಗ ಜಪ್ತಿ ಮಾಡಲಾಗಿ ರೂ.130/- ರೂಗಳನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಘಟನೆಗೆ ಸಂಬಂಧಿಸಿದಂತೆ ಸಾಯಂಕಾಲ 5-15 ರಿಂದ 6-15 ರವರೆಗೆ ಸ್ಥಳದಲ್ಲಿ ಪಂಚನಾಮೆಯನ್ನು ಬರೆದು, ಸ್ಥಳದಲ್ಲಿ ನಿಮ್ಮ, ಚಾಸಾ-1 ಮತ್ತು ಚಾಸಾ-2 ರವರ ಸಹಿ ಪಡೆದರು ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಶ್ರೀ.ಟಿ.ಸಿ.ಬಿ ವಕೀಲರಿಂದ ಆರೋಪಿಯವರ ಪರವಾಗಿ</u>

ಇಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಇದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ